ನಾಡಾಗಿಲ್ಲದ ಹುಚ್ಚಪ್ಪಾ, ಹೊಸಾ ನೆಂಟನೇ ಬರೂಮುಂದ ಹಳೇ ಭಂಟಂದೇನೊ ಜರೂರತ್ತಾ?'

'ಅಂದ್ರೇನಜ್ಜಿ, ಹೊಸಾ ನೆಂಟಾ ಬಂದಾನಂತ ಹಳೆಯ ಗಂಟಾ ಬ್ಯಾಡಾತೇನು?' ನಾನು ಕೆಣಕಿದೆ.

'ಮತ್ತ, ಹೊತ್ತ ಬಂದಾಂಗ ಹೋಗಬೇಕಲ್ಲೋ ತಂಮಾ. ಚಲ್ತಿ ಕಾ ನಾಮ್ ಗಾಡಿ ಅಂತಿರ್‍ತಾರ ಕೇಳಿ ಇಲ್ಲೊ?' ಬೊಚ್ಚುಬಾಯಿಯ ಅಜ್ಜಿ ಕಿಸಕ್ಕನೇ ನಕ್ಕಿತು. ಆ ನಗುವಿಗೆ ಅವಳ ಬಾಯೊಳಗಿದ್ದ ನಕಲಿ ದಂತಪಂಕ್ತಿಗಳು, ಮುಂದೆ ಕುಂತಿದ್ದ ನನಗೆ ಗಂಗಾಜಲ ಪ್ರೋಕ್ಷಣೆ ಮಾಡಿದವು.

'ಹಂಗಾದ್ರ, ಈ ಹಳೆಯ ಗಂಟಾ ಬ್ಯಾಡಂತೀ?' ನಾನೂ ಬಿಡಲಿಲ್ಲ.

'ಹೌದು, ಯಾಕ ಬೇಕಪಾ ಅದು. ನಮ್ಮ ಕಾಲದ ಆಣೆ ಚವಲಿಗಳ ಡೌಲು ಈಗೆಲ್ಲೇತಿ ಹೇಳು? ಆವಾಗಿನ ದುಡ್ಡಾ ದುಗ್ಗಾಣಿಗೊಳನ್ನ ತಗೊಂಡ ಏನ್ ಉಪ್ಪಿನಕಾಯಿ ಹಾಕೂದೈತೀ?' ಅಜ್ಜಿ ಸೋಲುವವಳಲ್ಲ.

'ಆದರೂ ಅಜ್ಜಿ.. ..' ತಡವರಿಸಿದೆ.

'ಆದರೂ ಇಲ್ಲಾ, ಹೊತ್ಕೊಳ್ಳೊ ಚಾದರೂ ಇಲ್ಲ. ಈಗಿಂದೀಗ ಬ್ಯಾಂಕಿಗೆ ಹೋಗೂಣೂ ನಡಿ'. ಅವಸರಿಸಿದ್ದಳು ಅಜ್ಜಿ. ಗರಿಗರಿ ಹೊಸ ನೋಟ್‌ಗಳು ಕೈಗೆ ಬಂದಾಗ, ಬೊಚ್ಚುಬಾಯಿಯ ಅಜ್ಜಿಯ ಮುಖದಲ್ಲಿ ಕಿರುನಗೆ ಸುಳಿದಾಡಿತು.

ಹೌದಲ್ಲ, ನಮ್ಮಜ್ಜಿ ಹೇಳೋದು ಬರೋಬ್ಬರಿ ಅಂತ ಅನಿಸ್ತು. ಈಗ ನೀವೇ ನೋಡ್ರಿ, ಮಾರ್ಕೆಟ್‌ನಲ್ಲಿ ಕೊಂಡಂತಹ ಯಾವುದೋ ಒಂದು ವಸ್ತು ಆದೀತು, ಹೊಸದರಲ್ಲಿ ಅದನ್ನು ಕೊಂಡಾಗಿನ ಉಮ್ಮೇದಿ ಕೊನೆಯವರೆಗೂ ಉಳಿಯಲಾರದು. ಕೆಲವೇ ಕೆಲವು ದಿನಗಳಲ್ಲಿ ಲಕಲಕ ಹೊಳೆಯುವ ಮತ್ತೊಂದು ಚೆಂದಾನ ಚೆಂದುಳ್ಳ ವಸ್ತು ಮಾರ್ಕೆಟ್ ಅಂಬೋ ಮಾಯಾಕಿನ್ನರಿಯೊಳಗೆ ಮಿಂಚುತ್ತಿರುತ್ತದೆ. ನಾವು ಕೊಂಡಂತಹ ಆವಾಗಿನ ಆ ಹೊಸ ವಸ್ತು ಈಗ ಹಳೆಯದಾಗಿ, ತನ್ನ ಗ್ಲ್ಯಾಮರ್ ಕಳೆದುಕೊಂಡಿರುತ್ತದೆ. ಅಲ್ಲಿಯವರೆಗೆ ನಮ್ಮ ಅಮೂಲ್ಯ ಗಂಟು ಎಂಬಂತಿದ್ದ ಆ ವಸ್ತು ಈಗ ಬೇಡವಾಗುತ್ತದೆ.

ಹೊಸ ನೆಂಟಸ್ತನದ ಬಯಕೆ, ಮುಂದೆ ಬರಲಿರುವುದರ ಕಣ್ಸನ್ನೆಯಾಗಿ ಕಾಣತೊಡಗುತ್ತದೆ. ದೇವಲೋಕದ ಅತಿಥಿಯೆಂಬಂತೆ ಹೊಸ ನೆಂಟನ ಉಪಚಾರಕ್ಕೆ ಘನಗತ್ತಿನಲ್ಲಿ ಮುಂದಾಗುತ್ತೇವೆ. ಹೀಗೆ ನಮಗರಿವು ಇಲ್ಲದೆ ಈ ನೆಂಟನ ಮಾಯಾಬಲೆಗೆ ಮೆಲ್ಲಮೆಲ್ಲಗೆ ಬಿದ್ದುಬಿಟ್ಟಿರುತ್ತೇವೆ. ಹೊಸದನ್ನು ಕಂಡಾಗ, ನಮ್ಮ ಮನದಂಗಳದಲ್ಲಿ ಬಯಕೆಯ ಸಸಿಗೆ ಸಡಗರ. 'ಇದ್ದುದೆಲ್ಲವ ಬಿಟ್ಟು ಇರದುದೆದರೆಡೆಗೆ ತುಡಿಯುವುದೇ ಜೀವನ' ಎಂದು ಹೇಳಿದ ಕವಿ ಗೋಪಾಲಕೃಷ್ಣ ಅಡಿಗರ ಕವಿತೆಯ ಸಾಲು ನೆನಪಿಗೆ ಬರುತ್ತದೆ.

ಬಾಯಲ್ಲಿ ರೊಟ್ಟಿ ತುಂಡು ಇಟ್ಟುಕೊಂಡು ಹೊರಟಿದ್ದ ನಾಯಿಯೊಂದಕ್ಕೆ, ಕೆರೆಯ ನೀರಿನಲ್ಲಿ ಅದರ ಪ್ರತಿಬಿಂಬ ಕಾಣಿಸುತ್ತದೆ. ತನ್ನ ಹತ್ತಿರ ರೊಟ್ಟಿಯ ಚೂರು ಇದ್ದರೂ, ಪ್ರತಿಬಿಂಬದಲ್ಲಿರುವ ನಾಯಿಯ ಬಾಯೊಳಗಿನ ರೊಟ್ಟಿಗಾಗಿ ಆಶೆ ಪಡುತ್ತದೆ. ಸದ್ಯ ಬಳಿ ಇರುವ ಗಂಟು ಬೇಡವಾಗಿ, ಇರದಿರುವ ಹೊಸ ನೆಂಟನತ್ತ ಜೀವ ತುಡಿಯತೊಡಗುತ್ತದೆ. ಹೊಸದಾದ ವಸ್ತುವೊಂದನ್ನು ಖರೀದಿಸಿ ಮನೆಗೆ ತರುವಾಗಿನ ಉಮ್ಮೇದಿ ವರ್ಣಿಸಲಸದಳ. ಮುಖ ಪ್ರಸನ್ನತೆಗೆ ಮನಃ ಪ್ರಸನ್ನತೆ ಮಣೆಹಾಕಿರುತ್ತದೆ. ಉತ್ಸಾಹ ಪುಟಿಯುತ್ತಿರುತ್ತದೆ. ಕಲ್ಪನೆಗಳೆಲ್ಲ ನವಿಲಿನ ಹಾಗೆ ಗರಿಗೆದರುತ್ತವೆ. ಗೆಲುವಿನ ನಗೆ ಚಿಗರುತ್ತದೆ. ವಾಂಛಲ್ಯ ಎಂಬ ಇಚ್ಛೆ ಇಣುಕುತ್ತದೆ.

ಅಂಗಡಿಯಾತನದು ಮುದದ ಮಾತುಗಾರಿಕೆ. ಮಾತಿನ ಹಿಂದೆ ಮಲ್ಲಿಗೆಯಂಥ ನಗು. ಲೌಕಿಕ ವ್ಯವಹಾರಜ್ಞತೆ ಇದೆ ಆತನಿಗೆ. ಅದು ಆತನ ಜನ್ಮದತ್ತ ಪ್ರತಿಭೆ. ಆತನ ಹಾವಭಾವಯುಕ್ತವಾದ ಸೂಕ್ತ ವರ್ಣನೆಗೆ ನಮ್ಮ ತವಕದ ಕಣ್ಣುಗಳು ಅರಳುತ್ತವೆ. ಆಕಾಶದ ನಕ್ಷತ್ರ ಎದೆಯನ್ನು ಸೇರಿದಷ್ಟು ಸಂತೋಷ. ಹೊಸ ನೆಂಟನೊಂದಿಗೆ ಭಾವನಾತ್ಮಕ ತಾದಾತ್ಮ್ಯ ಹುಟ್ಟಿಕೊಳ್ಳುತ್ತದೆ. ನಮ್ಮೆಲ್ಲರ ಮನೋಗಗನದಲ್ಲಿ ಕನಸುಗಳ ಮೋಡಗಳು ಆವರಿಸುತ್ತವೆ.



'ಓ ಬನ್ನಿರಿ ಅತಿಥಿಗಳೇ ಸುಸ್ವಾಗತ ನಿಮಗೆ, ಒಲವಿಗೆ ಒಲವಲ್ಲದೆ ಬೇರೆನಿದೆ ಕೊಡುಗೆ' ಎಂದು ಕವಿ ಜಿ.ಎಸ್. ಶಿವರುದ್ರಪ್ಪನವರ ಹಾಡು ಗುನುಗುನಿಸುತ್ತಾ ಹೊಸ ನೆಂಟನ ಮನೆ ತುಂಬಿಸಿಕೊಳ್ಳುತ್ತೇವೆ. ಬಂದಿರೋ ಆ ಹೊಸವಸ್ತುಗಳು ಅತಿಥಿರೂಪದಲ್ಲಿ ಅಲ್ಲವೇ? ಮತ್ತೆ, ಅತಿಥಿಯಾದವರು ಎಷ್ಟು ದಿನ ಅಂತ ಮನೆಯಲ್ಲಿ,